## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 17-08-2022

### ಬೀದರ ನೂತನ ನಗರ ಠಾಣೆ ಅಪರಾಧ ಸಂಖ್ಯೆ 143/2022 ಕಲಂ 457, 380 ಐಪಿಸಿ :-

ದಿನಾಂಕ 16/08/2022 ರಂದು 1000 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಸಾಯಿಕುಮಾರ ತಂದೆ ಮಡಿವಾಳಯ್ಯ ಸ್ವಾಮಿ ವಯ:21 ವರ್ಷ ಜಾತಿ:ಜಂಗಮ ಉ:ಪೂಜಾರಿ ಸಾ/ಕ್ರಾಂತಿ ಗಣೇಶ ಮಂದಿರಯ ಹತ್ತಿರ ಷಾಹಗಂಜ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ದಿನಾಂಕ 15/08/2022 ರಂದು ಸಂಕಷ್ಟ ಚತುರ್ತಿ ಇದ್ದ ಪ್ರಯುಕ್ತ ಮಂದಿರಲ್ಲಿ ರಾತ್ರಿ 11:30 ಪಿ.ಎಮ್. ಗಂಟೆಯ ವರೆಗೆ ಪೂಜಾ ಮಾಡಿ ಮಂದಿರದ ಬಾಗಿಲು ಮುಚ್ಚಿ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದು ಇರುತ್ತದೆ. ದಿನಾಂಕ 16/08/2022 ರಂದು ಮುಂಜಾನೆ 6:30 ಗಂಟೆಗೆ ಮನೆಯಿಂದ ಮರಳಿ ಬಂದು ನೊಡಿದಾಗ ಮಂದಿರದ ಬಾಗಿಲಿನ ಗ್ರಿಲ ಮುರಿದಿದ್ದು, ಮಂದಿರಲ್ಲಿಯ ಗಲ್ಲಾ ಪೆಟ್ಟಿಗೆ ಒಡೆದಿತ್ತು. ಹಾಗು ಮಂದಿರಲ್ಲಿಯ ಹಿತ್ತಾಳೆಯ ಹಾಗು ತಾಮ್ರದ ಸಾಮಾನುಗಳು ಕಳವು ಆಗಿದ್ದು ಇರುತ್ತದೆ. ಕಳವು ಆದ ವಿವರ ಈ ಕೆಳಗಿನಂತೆ ಇರುತ್ತದೆ. 1)ಮಂದಿರದ ಗಲ್ಲಾ ಪೆಟ್ಟಿಗೆಯಲ್ಲಿ ಇದ್ದ ಸುಮಾರು 1500/-ರೂ. ನಗದು ಹಣ, 2)ಒಂದು ಹಿತ್ತಾಳೆಯ ಗಣಪತಿ ವಿಗ್ರಹ. ಅ.ಕಿ.15000/-ರೂ. 3)ಒಂದು ಹಿತ್ತಾಳೆಯ ಚಿಕ್ಕ ಗಣಪತಿ ವಿಗ್ರಹ. ಅ.ಕಿ. 500/-ರೂ. 4)ಒಂದು ಹಿತ್ತಾಳೆಯ ಭವಾನಿ ಮೂರ್ತಿ ಅ.ಕಿ.500/-ರೂ. 5)ಒಂದು ತಾಮ್ರದ ಕೊಡ ಅ.ಕಿ.2500/-ರೂ. 6)ಒಂದು ಹಿತ್ತಾಳೆಯ ಆಶಿರ್ವಚನ ಮಾಡುವ ಶೆಟಗೋಪೂರ ಅ.ಕಿ. 900/-ರೂ. 7)ಒಂದು ಹಿತ್ತಾಳೆಯ ಪ್ಲೇಟ ಅ.ಕಿ.300/-ರೂ. 8)ಎರಡು ದೊಡ್ಡ ತಾಮ್ರದ ತೆಂಬಿಗೆ ಅ.ಕಿ.1600/-ರೂ. ಹೀಗೆ ಒಟ್ಟು ಅ.ಕಿ. 22,800/-ರೂ. ಬೆಲೆಬಾಳುವ ನಗದು ಹಣ ಹಾಗು ಸಾಮಾನುಗಳನ್ನು ಯಾರೊ ಕಳ್ಳರು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಮಾರ್ಕೆಟ ಪೊಲೀಸ ಠಾಣೆ ಅಪರಾಧ ಸಂಖ್ಯೆ 54/2022 ಕಲಂ 32, 34 ಕೆಇ ಕಾಯ್ದೆ :-

ದಿನಾಂಕ 16-08-202 ರಂದು 1000 ಗಂಟೆಯ ಸುಮಾರಿಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ನನಗೆ ಬಾತ್ಮಿ ಬಂದಿದೆನಂದರೆ, ಬೀದರ ನಗರದ ಅಶೋಕಾ ಹೋಟಲ ಹತ್ತಿರ ಒಬ್ಬ ವ್ಯಕ್ತಿ ಅನಧಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾನೆಂದು ಬಂದ ಬಾತ್ಮಿ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಅವನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಅವನು ತನ್ನ ಹೆಸರು ಗುರುನಾಥ ತಂದೆ ಮಾಣಿಕ ಶರಗಾರ ವಯ 40 ವರ್ಷ ಜಾತಿ ಎಸ್.ಟಿ.ಗೊಂಡಾ ಉ;ಆಟೊ ಚಾಲಕ ಸಾ:ಕೊಳಾರ(ಕೆ) ಗ್ರಾಮ ತಾ;ಜಿ;ಬೀದರ ಅಂತಾ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಸದರಿ ಪ್ಲಾಸ್ಟಿಕ ಕ್ಯಾರಿ ಬ್ಯಾಗ ಪರಿಶೀಲಿಸಿ ನೋಡಲಾಗಿ, ಇದರಲ್ಲಿ ಒರಿಜಿನಲ್ ಚೊಯಿಸ್ ವಿಸ್ಕಿ ಟೆಟ್ರಾ ಪ್ಯಾಕ 90 ಎಂ.ಎಲ್ ಒಟ್ಟು 41 ಇದ್ದು ಒಂದರ ಅ.ಕಿ.35/-ರೂ ಇದ್ದು ಒಟ್ಟು ಅ.ಕಿ.1435/-ರೂ ಇರುತ್ತದೆ. ಜಪ್ತಿ ಮಾಡಿಕೊಂಡು ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಔರಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 119/2022 ಕಲಂ 87 ಕೆಪಿ ಕಾಯ್ದೆ:-

ದಿನಾಂಕ: 16/08/2022 ರಂದು 1700 ಗಂಟೆಗೆ ಪಿಎಸ್ಐ ರವರು ಔರಾದ [ಬಿ] ಪೊಲೀಸ್ ಠಾಣೆಯಲ್ಲಿದ್ದಾಗ ಔರಾದ-ಚಿಂತಾಕಿ ರೋಡಿನ ಮಮದಾಪೂರ ಗ್ರಾಮದ ಸಂಜುಕುಮಾರ ಬಿರಾದಾರ ರವರ ಹೋಲದ ಹತ್ತಿರ ಹುಣಸೆ ಮರದ ಕೆಳಗೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಸೇರಿ ಆಕ್ರಮ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ಸಂಜುಕುಮಾರ ಬಿರಾದಾರ ರವರ ಹೋಲದ ಹತ್ತಿರ ಹುಣಸೆ ಮರದ ಕೆಳಗೆ ಸಾರ್ವಜನಿಕ ಸ್ಥಳದಲ್ಲಿ 7 ಜನರು ಗುಂಪು ಕಟ್ಟಿಕೊಂಡು ಗೊಲಾಗಿ ಕುಳಿತು ಇಸ್ಪೇಟ ಎಲೆಗಳಿಂದ ಹಣ ಹಚ್ಚಿ ಪಣ ತೊಟ್ಟು ಅಂದರ ಬಾಹರ ಅನ್ನುವ ಜೂಜಾಟ ಆಡುತಿದ್ದರು ಅದನ್ನು ನೋಡಿ ಖಚಿತ ಪಡಿಸಿಕೊಂಡು ಅವರ ಮೇಲೆ ದಾಳಿ ಮಾಡಿ ಹಿಡಿದು ಅವರಿಗೆ

ಹೆಸರು ವಿಳಾಸ ವಿಚಾರಿಸಿ ಅಂಗ ಪರಿಶಿಲಿಸಿದಾಗ 1] ರಘುನಾಥ ತಂದೆ ಚಂದ್ರಪ್ಪ ಬಿರಾದಾರ ವಯ 50 ವರ್ಷ ಜಾತಿ, ರೆಡ್ಡಿ ಉದ್ಯೋಗ,ಒಕ್ಕಲುತನ ಸಾ, ಕರಂಜಿ (ಬಿ) ಇತನ ಹತ್ತಿರ 450/- ರೂಗಳು 2] ಚಂದ್ರಕಾಂತ ತಂದೆ ಗಣಪತಿ ಕೋಟೆ ವಯ 45 ವರ್ಷ ಜಾತಿ,ಎಸ.ಸಿ ಹೋಲಿಯಾ ಉದ್ಯೋಗ, ಕೂಲಿ ಕೆಲಸ ಸಾ, ಮಮದಾಪೂರ ಇತನ ಹತ್ತಿರ 400/-ರೂಗಳು 3] ನಾಮದೇವ ತಂದೆ ತುಕಾರಾಮ ಕಾಂಬಳೆ ವಯ 40 ವರ್ಷ ಜಾತಿ, ಎಸ ಸಿ ಹೋಲಿಯಾ ಉದ್ಯೋಗ, ಕೂಲಿ ಕೆಲಸ ಸಾ, ಮಮದಾಪೂರ ಇತನ ಹತ್ತಿರ 400/-ರೂಗಳು 4] ರಾಜಕುಮಾರ ತಂದೆ ತುಳಸಿರಾಮ ಜುಲಂಡೆ ವಯ 30 ವರ್ಷ ಜಾತಿ, ಎಸ.ಸಿ ಹೋಲಿಯಾ ಉದ್ಯೋಗ, ಕೂಲಿ ಕೆಲಸ ಸಾ, ಅಲ್ಲಾಪೂರ ಇತನ ಹತ್ತಿರ 450/- ರೂಗಳು 5] ತುಕಾರಾಮ ತಂದೆ ವಿಠಲ ಗೊಖಲೆ ವಯ 48 ವರ್ಷ ಜಾತಿ,ಎಸ.ಸಿ ಹೋಲಿಯಾ ಉದ್ಯೋಗ, ಕೂಲಿ ಕೆಲಸ ಸಾ, ಅಲ್ಲಾಪೂರ ಇತನ ಹತ್ತಿರ 500/- ರೂಗಳು 6] ದತ್ತಾತ್ರಿ ರೆಡ್ಡಿ ತಂದೆ ಬಾಬು ರೆಡ್ಡಿ ಭುತಕೂರೆ ವಯ 31 ವರ್ಷ ಜಾತಿ, ರೆಡ್ಡಿ ಉದ್ಯೋಗ, ಚಾಲಕ ಸಾ, ಮಮದಾಪೂರ ಇತನ ಹತ್ತಿರ 700/-ರೂಗಳು 7] ಅನೀಲಕುಮಾರ ತಂದೆ ಚೆನ್ನಬಸಪ್ಪ ಪಾಟೀಲ್ ವಯ 48 ವರ್ಷ ಜಾತಿ, ಲಿಂಗಾಯತ, ಉದ್ಯೋಗ, ಒಕ್ಕಲುತನ ಸಾ, ಮಮದಾಪೂರ ಇವನ ಹತ್ತಿರ 350/- ರೂ ಇದ್ದವು ನಂತರ ಎಲ್ಲರ ಮದ್ಯ ಇದ ಸ್ಥಳವನ್ನು ಪರಿಶಿಲಿಸಿ ನೋಡಲು ಸ್ಥಳದಲ್ಲಿ 550/- ರೂ ಮತ್ತು. ಹೀಗೆ ಒಟ್ಟು 52 ಇಸ್ಪೇಟ ಎಲೆಗಳು ಹೀಗೆ ಒಟ್ಟು ನಗದು ಹಣ 4800/- ರೂಪಾಯಿಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಜನವಾಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 82/2022 ಕಲಂ 394 ಐಪಿಸಿ :-

ದಿನಾಂಕ 16/08/2022 ರಂದು 21:00 ಗಂಟೆಗೆ ಶ್ರೀ ಸಾಗರ ತಂದೆ ಶ್ರೀ ಶೈಲ್ ಸಾ|| ಹಸ್ನಬಾದ್, ರಾಯಕೊಡ ಮಂಡಲ್ ತಾ: ಆಂದೋಲ್ ಜಿ: ಸಂಗಾರಡ್ಡಿ ರವರು ಪೊಲೀಸ್ ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ಫಿರ್ಯಾದಿಯು ನ್ಯೆರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ನಾರಾಯಣಖೇಡ ದಲ್ಲಿ ಬ್ರ್ಯಾಂಚ್ ಮ್ಯಾನೇಜರ ಅಂತ 3 ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದು ಬ್ಯಾಂಕಿನಲ್ಲಿ ಹಣ ಕಲೇಕ್ಷನ್ ಮಾಡುವ ಕೆ. ಪ್ರಶಾಂತ ಇವನು ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದು, ದಿನಾಂಕ: 16/08/2022 ರಂದು ರಜೆಯ ಮೇಲೆ ಇದ್ದುದರಿಂದ ಫಿರ್ಯಾದಿಯು ಆತನ ಏರಿಯಾದಲ್ಲಿ ಹಣ ಕಲೇಕ್ಷನ್(ಸಂಗ್ರಹ) ಮಾಡಿಕೊಂಡು ಬರಲು ದಿನಾಂಕ: 16/08/2022 ರಂದು ಮಲಗಿ ಗ್ರಾಮಕ್ಕೆ ಬೆಳಿಗ್ಗೆ 8.30 ಗಂಟೆ ಸುಮಾರಿಗೆ ಹೋಗಿದ್ದು, ಮಲಗಿ ಗ್ರಾಮದಲ್ಲಿಯ ಸುಮಾರು 35 ಜನ ಬ್ಯಾಂಕ್ ಗ್ರಾಹಕರಿಂದ ಸುಮಾರು 60,000/- ರೂಪಾಯಿ ಹಣ ಸಂಗ್ರಹಿಸಿಕೊಂಡು ಆ ಹಣವನ್ನು ಕಪ್ಪು ಬಣ್ಣದ ಬ್ಯಾಗಿನಲ್ಲಿ ಇಟ್ಟುಕೊಂಡು, ಮೋಟಾರ ಸೈಕಲ್ ನಂ. ಟಿ.ಎಸ್-15 ಇ.ಎಸ್-0248 ಹೊಂಡಾ ಯುನಿಕಾನ್ ಮೇಲೆ ಮಲಗಿಯಿಂದ ಕರ್ನಾಟಕದ ಅಲ್ಮಾಸಪೂರ ಮಾರ್ಗವಾಗಿ ಚಿಕ್ಕುತರ್ಿ ಗ್ರಾಮಕ್ಕೆ ಹಣ ಸಂಗ್ರಹಿಸಲು ಹೋಗಬೇಕಂತ ಯೋಚನೆ ಮಾಡಿ ಮಲಗಿಯಿಂದ ಅಲ್ಮಾಸಪೂರ ಗ್ರಾಮದ ಕಡೆಗೆ ಹೋಗುವಾಗ ಅಲ್ಮಾಸಪೂರ ಗ್ರಾಮ ಸ್ವಲ್ಪ ದೂರದಲ್ಲಿದ್ದಾಗ ಬೆಳಿಗ್ಗೆ ಅಂದಾಜು 11:15 ಗಂಟೆ ಸುಮಾರಿಗೆ ಹಿಂದಿನಿಂದ ಒಂದು ಬಿಳಿ ಬಣ್ಣದ ಸ್ಕೂಟಿ ಮೋಟಾರ್ ಸೈಕಲ್ ಮೇಲೆ ಮೂವರು ಜನರು ಮುಖಕ್ಕೆ ಮಾಸ್ಕ ಮತ್ತು ಮಂಕಿ ಕ್ಯಾಪ್ಗಳನ್ನು ಹಾಕಿಕೊಂಡು ಹಿಂದಿನಿಂದ ಬಂದು ತಮ್ಮ ಕೈಯಲ್ಲಿದ್ದ ಕಟ್ಟಿಗೆಯಿಂದ ತಲೆಯಲ್ಲಿ ಹೊಡೆದಿರುತ್ತಾರೆ. ಆಗ ಫಿರ್ಯಾದಿಯು ಕೂಗುತ್ತಿದ್ದಾಗ ಅವರು ಬಲ ಸೈಡಿಗೆ ಬಂದು ಬಲಕೈ ರಟ್ಟೆಯ ಮೇಲೆ ಹೊಡೆದು ಆ ಮೂರು ಜನರು ಮೋಟಾರ ಸೈಕಲ್ ಹ್ಯಾಂಡಲ್ಕ್ಕೆ ಇದ್ದ ಹಣವುಳ್ಳ ಬ್ಯಾಗನ್ನು ತೆಗೆದುಕೊಂಡು ತಮ್ಮ ಸ್ಕೂಟಿ ಮೋಟಾರ ಸೈಕಲ್ ಮೇಲೆ ಓಡಿ ಹೋಗಿರುತ್ತಾರೆ. ಆ ಬ್ಯಾಗಿನಲ್ಲಿ ಗ್ರಾಹಕರಿಂದ ಸಂಗ್ರಹಿಸಿದ ನಗದು ಹಣ 60,000/- ರೂಪಾಯಿ, ರಿಸಿಪ್ಟ ಬುಕ್, ಕಲೇಕ್ಷನ್ ಡಿಮಾಂಡ್ ಶೀಟ್ ಇರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.